


ಊರಲ್ಲಿನ ಹಳೆಯ ಹೆಂಚಿನ ಮನೆಯಲ್ಲಿ ಅವನ ನಾಕುಜನ ಅಣ್ಣತಮ್ಮಂದಿರುಗಳನ್ನೆಲ್ಲ ಸೇರಿಸಿಕೊಂಡು ಹಬ್ಬ ಮಾಡಿಸಿ ಉಂಬಾಕಿಕ್ಕುಸ್ ಬಿಡತ್ತಿದ್ದ. ಆವತ್ತಿನ ದಿನದಿಂದ ಈವತ್ತಿನ ತನಕವು ಅಂದರೆ ರಿಟೈರ್ಡ್ ಆಗಿ ಹತ್ತು ವರ್ಷ ಕಳೆದಿದ್ದರೂ ಅವನ ಊರಿನ ಮೋಹದ ಪೊರೆ ಈಗಲು ಇನ್ನು ಗಾಢವಾಗಿ ಸುತ್ತಿಕೊಂಡ್ಯೆತೆ. ಅದು ಯಾಕೆಂದರೆ ಅಪ್ಪನಿಗೆ ಅವನೆಂದರೆ ಅವನ ಕೆಲಸವೆಂದರೆ ಅವನ ಸಾಧನೆಯೆಂದರೆ ಯಾವಾಗಲು ನನ್ನೆಸರೆ ಮುಂದಿರಬೇಕೆಂಬ ಅವನ ಹೆಸರು ರಾರಾಜಿಸಲು ಒದ್ದಾಡುತ್ತಿರುವ ಜಾಯಮಾನದವನು. ಅಪ್ಪನ ಜೊತಿಗೆ ಅಮ್ಮನು ಕೂಡ ಹಳ್ಳಿಯ ಸೊಗಡು ಸಾರು ಹಬ್ಬ ಹರಿದಿನದ ಹಂಬಲದಲ್ಲಿ ತಾತ ಮುತ್ತಾಂದಿರ ಸಂಪ್ರದಾಯಕ್ಕೆ ಕರಾರುವಾಕ್ಕಾಗಿ ಜೋತು ಬಿದ್ದವರು. ಆದ್ರೆ ನಾವಿದ್ದಂಗೆ ನಾವು ಬದುಕುದಂಗೆ ಇನ್ನಿರೋವರು ಇಂಗೆ ಇರ್ಬೇಕೆನ್ನುವ ನಮ್ಮಿಂದಲೆ ಲೋಕವೆಲ್ಲ ಮುಂದುಕ್ಕೋಗುತಿರೋದು ಎಂಬ ಪ್ರತಿಷ್ಟೆಯೆನ್ನುವುದು ಅವರೆದೆಯಲ್ಲಿ ಸಾರಾಸಗಟಾಗಿ ಬೇರೂರಿಕೊಂಡ್ಯೆತೆ.

ಅಂಗಾಗೆ ಈಗ ನನಗು ನಮ್ಮಣ್ಣಯ್ಯನಿಗು ಬಂದಿರೊ ಹೆಂಡ್ರುಗಳ ಸ್ವಬಾವಕ್ಕು ಮತ್ತು ಅಪ್ಪ ಅಮ್ಮನ ಸ್ವಬಾವಕ್ಕು ಅಜಗಜಾಂತರ, ಮನೆಯಲ್ಲಿ ಸಣ್ಣ ಪುಟ್ಟದ್ದಕ್ಕೆಲ್ಲ ಮಾತು ಮುಗ್ಗರಿಸಲಾಗದ ಮನಸ್ಸುಗಳು ಒಳಗೊಳಗೆ ತಾಕಲಾಡಿ ಇವರ ನಡುಮಧ್ಯೆ ಅಸಮಾಧಾನದ ಕಂಟು. ಆಗಾಗ ನನ್ನ ಮತ್ತು ಅಣ್ಣಯ್ಯನ ಮನಸ್ಸಿಗಂಟಿಕೊಂಡು ಒಂತರ ಒಣಕೆಮ್ಮು ಇತ್ಲಾಗೆ ಉಗಿಯಂಗು ಇಲ್ಲ, ಅತ್ಲಾಗೆ ನುಂಗಂಗು ಇಲ್ಲ ಅನ್ನಂಗಾಗ್ಯೆತೆ. ಅತ್ತಿಗೆಗೂ ನನ್ನಹೆಂಡತಿಗೂ ಹಬ್ಬ ಹರಿದಿನಗಳೆಂದರಾಗಲಿ ವಾರ ಉಜ್ಜಿನೆಗಳೆಂದರಾಗಲಿ ಯಾವತ್ತು ಮೈನೋಯಿಸಿಕೊಂಡು ಅಡುಗೆ ತಿಂಡಿ ಮಾಡುವವರಲ್ಲ. ಎಲ್ಲ ರೆಡಿ ಸಿಗುತ್ತಲ್ಲ ಇಷ್ಟಕ್ಕೆಲ್ಲ ಯಾಕ್ ಪರದಾಡ್ ಬೇಕು ಏನು ಮೈಮುರಿದು ಬಾಡಿ ಸ್ಟ್ರೈನ್ ಮಾಡಕೊಂಡು ತಿನ್ನುಬೇಕೇಂದಿನಿಲ್ಲವಲ್ಲ?